ಮರುಕ್ಷಣವೇ ಸುಕೃತಿ 'ನಾನು ತುಂಬಾ ಪಾಪ ಮಾಡಿದ್ದೇನೆ ಅಪ್ಪಾ, ನಿಮಗೆ ತುಂಬಾ ಅನ್ಯಾಯ ಮಾಡಿದ್ದೇನೆ. ತುಂಬಾ ದ್ರೋಹ ಮಾಡಿದ್ದೇನೆ, ನಾನು ಪಾಪಿ' ಎಂದು ಒಂದೇ ಹೆಸರಿನಲ್ಲಿ ಹೇಳಿ ತಂದೆಯ ಪಾದದ ಮೇಲೆ ಬಿದ್ದಳು. ನರಹರಿ ಅವಳನ್ನು ಎಬ್ಬಿಸಿ ತಬ್ಬಿಕೊಂಡ. ಕೂಡಲೇ ಮಕ್ಕಳು ಶಮಿ ಮತ್ತು ಕಾಂತಿ ಅಜ್ಜನ ಪಾದ ಮುಟ್ಟಿ ವಂದಿಸಿದರು. ನರಹರಿ ಮಕ್ಕಳಿಬ್ಬರನ್ನೂ ಬಾಚಿ ತಬ್ಬಿಕೊಂಡ. ಎಲ್ಲರ ಕಣ್ಣುಗಳೂ ಕಣ್ಣೀರ ಕಡಲಾಗಿತ್ತು. ಸುಕೃತಿ ಅಳುತ್ತಲೇ ಇದ್ದಳು. ಅಪ್ಪನಂತೆಯೇ ನಿರ್ಲಿಪ್ತನಾಗಿರುತ್ತಿದ್ದ ಅಭಿ ಕೂಡ ಅಳು ತಡೆದುಕೊಂಡು ಕಣ್ಣೀರು ಒರಸಿಕೊಳ್ಳುತ್ತಾ ಇದ್ದ.

29

ಎರಡು ದಿನಗಳ ಬಳಿಕ ಅಭಿ ಮತ್ತು ಸುಕೃತಿ ಚೆನ್ನೈಗೆ ಹೋಗಿ ಮನೆ ಮತ್ತು ಕಾರು ಕೊಳ್ಳುವವರನ್ನು ಸುಕೃತಿಯ ಮನೆಗೆ ಬರಹೇಳಿದರು. ಅಗತ್ಯವಿರುವ ಕಾಗದ ಪತ್ರಗಳಿಗೆ ಸುಕೃತಿ ಸಹಿ ಮಾಡಿದಳು. ಬ್ಯಾಂಕ್ ಡ್ರಾಫ್ಟ್ ತೆಗೆದುಕೊಂಡರು. ಸರಿಯಾಗಿದೆಯೆ ಎಂದು ಅಭಿ ಪರಿಶೀಲಿಸಿದ. ಎಲ್ಲವೂ ಸರಿಯಾಗಿತ್ತು. ಅವರಿಗೆ ಥ್ಯಾಂಕ್ಸ್ ಹೇಳಿ ಇಬ್ಬರೂ ಏರ್‌ಪೋರ್ಟ್‌ಗೆ ಬಂದರು. ಪ್ಲೇನಿನಲ್ಲಿ ಕುಳಿತ ನಂತರ ಬಹಳ ಹೊತ್ತಿನವರೆಗೂ ಮ್ಲಾನವಾಗಿದ್ದ ಸುಕೃತಿಯ ಮುಖವನ್ನು ನೋಡಿ ಅಭಿ ಹೇಳಿದ, 'ಸುಕೃತಿ ನೀನು ಏನೋ ಚಿಂತೆಯಲ್ಲಿರುವೆ. ಅದರ ಕಾರಣ ನನಗೆ ಗೊತ್ತು. ಎರಡು ದಿನಗಳ ಬಳಿಕ ನಿನ್ನ ಚಿಂತೆಗೆ ಪರಿಹಾರ ದೊರಕಿಸುವ ಬಗ್ಗೆ ಮಾತಾಡೋಣ'.

ಆನೆಮಹಲಿನ ಮನೆ ತಲಪಿದ ಮರುದಿನ ಸುಕೃತಿಯೊಡನೆ ಅಭಿ ಹೇಳಿದ, 'ಅಪ್ಪ ಮತ್ತು ನಾನು ನಾಳೆ ಬೆಳಿಗ್ಗೆ ಬೆಂಗಳೂರಿಗೆ ಹೋಗುತ್ತೇವೆ. ಸಾಯಂಕಾಲ ಬರುತ್ತೇವೆ. ನಾವು ಬರುವವರೆಗೆ ಏನೂ ಚಿಂತೆ ಮಾಡದೆ ಇಲ್ಲೇ ಇರು. ಮಕ್ಕಳು ಮನೆಯ ಹೊರಗಡೆ ಸುತ್ತಾಡಲು ಹೋಗುವುದು ಬೇಡ. ಕರೆಗಂಟೆ ಒತ್ತಿದರೆ ಹೋಟೆಲಿನ ಆಳು ಬರುತ್ತಾನೆ. ನಿಮಗೆ ಬೇಕಾದ ಊಟ ತಿಂಡಿಗೆ ಅವನಲ್ಲಿ ಹೇಳಿ. ನೀವು ಎಲ್ಲಿಗೂ ಹೋಗಬೇಕಾಗಿಲ್ಲ. ಹೊರಗೆಲ್ಲೂ ಹೋಗಬೇಡಿ. ನಿನ್ನ ಜೊತೆ ಹೇಳುವುದು ಕೇಳುವುದು ತುಂಬಾ ಇದೆ. ನಾವು ಬಂದ ಮೇಲೆ ಎಲ್ಲ ಮಾತಾಡೋಣ' ಎಂದ.

ಮರುದಿನ ಅಭಿ ಮತ್ತು ನರಹರಿ ಬೆಂಗಳೂರಿಗೆ ಹೊರಟರು. ಬಸ್ಸಿನಲ್ಲಿ ಬಹಳ ಕಡಿಮೆ ಪ್ರಯಾಣಿಕರಿದ್ದರು. ಒಳ್ಳೆಯದಾಯಿತು, ಅಪ್ಪನ ಜೊತೆ ಮಾತಾಡುತ್ತಾ ಹೋಗಬಹುದು. ಅಪ್ಪನಿಗೆ ಹೇಳಲೇಬೇಕಾಗಿದ್ದ ತನ್ನ ಜಪಾನು ಅನುಭವದ ವಿವರಗಳನ್ನು ಹೇಳಬಹುದು ಎಂದುಕೊಂಡು, 'ಅಪ್ಪಾ, ಮುರಾರಿ ಮತ್ತು ನಾನು ಆರು ತಿಂಗಳು ಯೊಕೊಹೋಮೊ ನಗರದಲ್ಲಿ ಒಂದು ಇನ್‌ಫರ್ಮೇಶನ್ ಟೆಕ್ನಾಲಜಿ ಕಂಪೆನಿಯಲ್ಲಿ ಕೆಲಸ ಮಾಡಿದೆವು. ಮುರಾರಿ ಹಲವು ವರ್ಷಗಳಿಂದ ಬೇರೆ ಬೇರೆ ಕಂಪೆನಿಗಳಲ್ಲಿ ಕೆಲಸ ಮಾಡಿದ್ದ. ಅದೇ ಕಂಪೆನಿಯಲ್ಲಿ ನಾನು ಕೂಡ ಕೆಲಸ ಪಡೆದುಕೊಂಡೆ. ನನಗೆ ಈ ಕೆಲಸ ಸಾಕಾಗಿ ಹೋಗಿದೆ ಅಭಿ. ನಿನ್ನನ್ನು ಯಾಕೆ ಬರಹೇಳಿದೆನೊ ಅನಿಸ್ತದೆ. ನಿಂಗೆ ಹೇಗನಿಸ್ತದೆ ಈ ಇನ್‌ಫರ್ಮೇಶನ್ ಟೆಕ್ನಾಲಜಿ ಕೆಲಸ?' ಎಂದು ಕೇಳಿದ. 'ನಿಂಗನಿಸುವುದೇ ನಂಗನಿಸ್ತಾ ಇರ್ತದೆ' ಅಂತಂದೆ.

'ಏನೋ ತಪ್ಪು ಮಾಡಿದೆ ಅಂತಂದ್ಕೊಳ್ಬೇಡ ಮುರಾರಿ. ಅಮೆರಿಕೆಯಲ್ಲಿ ನಾನು ಇದೇ ಕೆಲಸ ಮಾಡ್ತಿದ್ದೆನಲ್ಲಾ, ಸಾಕು ಅಂತ ಬಿಟ್ಟು ಬಂದೆ. ಈ ಕೆಲಸ ಈಗಲೂ ಅಲ್ಲಿ ಇಲ್ಲಿ ಎಲ್ಲಿಯಾದರೂ ಸಿಕ್ಕೇ ಸಿಗುತ್ತೆ. ಈ ಬ್ರೈನ್‌ಬೆರಳು ಕೆಲಸವನ್ನು ಯಾಕೆ ಮಾಡ್ತೇವೆ, ಕೇವಲ ಸಂಪಾದನೆಯ ಸಂತೋಷಕ್ಕಾಗಿ ಅಲ್ಲವೆ? ಇದನ್ನು ಬಿಟ್ಟು ನಿಜವಾದ ಸಂತೋಷ ಸಿಗುವ ಬೇರೇನಾದ್ರೂ ಕೆಲಸ ಮಾಡೋಣ ಅಂತನಿಸುತ್ತಾ ಇರುತ್ತೆ' ಅಂತ ನಾನು ಮುರಾರಿಗೆ ಸಮಾಧಾನ ಹೇಳಿದೆ. ಸಮಾಧಾನ ನನ್ನೊಳಗೆ ಇರಲಿಲ್ಲ.

ಬೇರೆ ಏನು ಮಾಡಬಹುದು ಎಂದು ದಿನಾ ಚರ್ಚಿಸುತ್ತಾ ಇದ್ದೆವು. ಹಾಗೆ ಆರು ತಿಂಗಳು ಕಳೆಯಿತು. ಬೋರಾಗ್ತಿದೆ, ಒಮ್ಮೆ ಊರಿಗಾದರೂ ಹೋಗಿ ಬರೋಣ ಎಂದುಕೊಳ್ಳುತ್ತಿರುವಾಗ ಜಪಾನಿನ ನಗೋಯಾ ಎಂಬ ನಗರದಲ್ಲಿ ನಡೆಯುತ್ತಿದ್ದ ಒಂದು ಸೆಮಿನಾರಿಗೆ ವೀಕ್ಷಕರಾಗಿ ನಾವಿಬ್ಬರೂ ಹೋದೆವು. ಸೆಮಿನಾರಿನ ಮುಖ್ಯ ವಿಷಯ ಬಹಳ ಸರಳವಾಗಿತ್ತು. 'ವಿಜ್ಞಾನದಿಂದ ಇವತ್ತು ಸಾಮಾನ್ಯ ಮನುಷ್ಯನಿಗೆ ಏನು ಸಿಗುತ್ತದೆ?' ಎನ್ನುವುದಾಗಿತ್ತು. ಹಲವು ವಿಜ್ಞಾನಿಗಳು ಭಾಗವಹಿಸಿದ್ದರು. ಚರ್ಚೆಯ ಮುಕ್ಕಾಲಂಶ ಕೊನೆಗೊಂಡಾಗ ವಿರಾಮವಿತ್ತು. ವಿರಾಮ ಕೊನೆಗೊಂಡು ಪುನರಾರಂಭವಾಗುವಾಗ ವೀಕ್ಷಕರು ಏನಾದರೂ ಪ್ರಶ್ನೆ ಕೇಳುವುದಿದ್ದರೆ ಈಗ ಕೇಳಬಹುದು' ಎಂದು ಘೋಷಿಸಿದರು. ಆ ಅವಕಾಶಕ್ಕೇ ಕಾಯುತ್ತಿದ್ದ ಮುರಾರಿ ಒಂದೆರಡು ಪ್ರಶ್ನೆಗಳನ್ನು ಕೇಳಿದ; ನಾನು ಕೂಡ ಎರಡು ಪ್ರಶ್ನೆಗಳನ್ನು ಕೇಳಿದೆ. ಆ ಕುರಿತು ವಿವರವಾಗಿ ಮನೆಯಲ್ಲಿ ಮಾತಾಡೋಣ. ನಾಳೆ ಆನೆಮಹಲಿಗೆ ಮುರಾರಿ ಕೂಡ ಬರ್ತೇನೆ ಅಂದಿದ್ದಾನೆ' ಎಂದ ಅಭಿ, 'ಸೆಮಿನಾರ್ ಕೊನೆಗೊಂಡಾಗ ಒಬ್ಬ ನಡುವಯಸ್ಸಿನ ಮಹಿಳೆ ನಮ್ಮ ಬಳಿ ಬಂದಳು. 'ಬನ್ನಿ ಕುಳಿತುಕೊಂಡು ಮಾತಾಡೋಣ' ಎಂದು ಆಕೆ ಹೇಳಿದಳು. ನಾವು ಒಂದು ಕಡೆ ಕುಳಿತೆವು. ಆಕೆ ತನ್ನ ಪರಿಚಯ ಹೇಳಿದಳು. ಹೆಸರು 'ಅಡಿನ' ಎಂದಳು. ಆಕೆ ಇಸ್ರೇಲಿನ ಒಬ್ಬಳು ದೊಡ್ಡ ವಿಜ್ಞಾನಿಯಾಗಿದ್ದಳು. ಆಕೆ ಭೂಗರ್ಭವಿಜ್ಞಾನ, ಪರಿಸರ ವಿಜ್ಞಾನ ಎಲ್ಲದರಲ್ಲಿಯೂ ಆಳವಾದ ಅಧ್ಯಯನ ಮತ್ತು ಸಂಶೋಧನೆ ಮಾಡಿದ್ದಳು. ಮತ್ತೂ ವಿಶೇಷವೆಂದರೆ, ಮನುಷ್ಯ ಸಾಮಾನ್ಯವಾಗಿ ಗಮನಿಸುವ ಗೊಡವೆಗೇ ಹೋಗದ, ನೀರು, ಗಾಳಿ ಮತ್ತು ಮಣ್ಣಿನ ಬಗ್ಗೆ ಆಕೆ ಬಹಳ ಸಂಶೋಧನೆ ಮಾಡಿದ್ದಳು. ಆಕೆಯ ಪರಿಚಯವನ್ನು ಕೇಳಿಯೇ ಬೆರಗುಗೊಂಡಿದ್ದ ನಮಗೆ ಅವಳ ಸಾಧನೆಗಳ ಕುರಿತು ಕೇಳಿ ಒಂದು ಹೊಸ ಲೋಕವನ್ನು ಪ್ರವೇಶಿಸಿದಂತಾಯಿತು. ಅರ್ಧ ಗಂಟೆ ಇಂಗ್ಲಿಷಿನಲ್ಲಿ ನಮ್ಮ ಮಾತುಕತೆ ನಡೆಯಿತು. ಮಾತು ಮುಗಿಸಿ, 'ನಾನು ಹೇಳಿದ ವಿಷಯಗಳಲ್ಲಿ ನಿಮಗೆ ಅಧ್ಯಯನ ಮಾಡುವ ಮನಸ್ಸಿದ್ದರೆ ಇಸ್ರೇಲಿಗೆ ಬನ್ನಿ. ಟೆಲ್ ಅವೀವ್ ಯುನಿವರ್ಸಿಟಿಯ ಹೆಸರು ನೀವು ಕೇಳಿರಬಹುದು. ಅದಲ್ಲದೆ ಇಸ್ರೇಲಿನಲ್ಲಿ ಬೇರೆ ಒಂಬತ್ತು ಯುನಿವರ್ಸಿಟಿಗಳಿವೆ. ಇತರ ಅಧ್ಯಯನ ಸಂಸ್ಥೆಗಳಿವೆ. ಯಾವುದಾದರೂ ಒಂದು ಯುನಿವರ್ಸಿಟಿಯಲ್ಲಿ ನಿಮಗೆ ಫೆಲೋಶಿಪ್ ಸಿಗುತ್ತದೆ. ನಾನು ಶಿಫಾರಸ್ಸು ಮಾಡುತ್ತೇನೆ. ನಿಮ್ಮ ವಿವರವಾದ ಬಯೋ ಡೇಟಾ ಮತ್ತು ಫೋಟೊ ಕೂಡಲೇ ನನಗೆ ಕಳಿಸಿ. ಬೇಗನೆ ಕಳಿಸಿ' ಎಂದು ಹೇಳಿ, ಆಕೆಯ ಫೋನು ನಂಬರ್, ಇಮೇಲ್ ಐಡಿ ಕೊಟ್ಟು, 'ಇಂಡಿಯಾ ಈಸ್ ಅವರ್ ಫ್ರೆಂಡ್' ಎಂದು ಹೇಳಿ, ಕೈಕುಲುಕಿ, 'ನಮಸ್ತೆ' ಎಂದು ಹೇಳಿ ಹೊರಟು ಹೋದರು', ಅಭಿ ಮಾತು ಮುಗಿಸಿದಾಗ ನರಹರಿ ಮುಗುಳ್ನಕ್ಕು, 'ಗ್ರೇಟ್' ಎಂದು ಹೇಳಿದ. ಬೇರೆ ಮಾತು ಆಡಲಿಲ್ಲ.

ಮುರಾರಿ ಬೆಂಗಳೂರು ಬಸ್‌ಸ್ಟಾಂಡಿನಲ್ಲಿ ಅವರ ಬರವನ್ನು ಎದುರು ನೋಡುತ್ತಾ ಇದ್ದ.

'ಇಷ್ಟು ಕಾಲವೂ ನಾನು ನಿಮ್ಮ ಬಗ್ಗೆ ಯೋಚಿಸುತ್ತಾ ಇದ್ದೆ. ಆನೆಮಹಲಿಗೆ ಹೋಗೋಣ ಎಂದು ಹಲವು ಬಾರಿ ಅನಿಸಿತು. ಆದರೆ ಅದು ಎಲ್ಲಿ ಎಂದು ಗೊತ್ತಿರಲಿಲ್ಲ. ಹುಡುಕುವ ಬಗೆ ತಿಳಿಯಲಿಲ್ಲ. ನೀವಿಬ್ಬರೂ ಪುನಃ ಅಮೆರಿಕೆಗೆ ಹೋದಿರೇನೊ ಅಂದುಕೊಂಡೆ. ನಿಜವಾಗಿ ನೀವು ಇಷ್ಟು ದೀರ್ಘ ಕಾಲ ಎಲ್ಲಿದ್ದಿರಿ?' ಮುರಾರಿ ಕೇಳಿದ.

'ಬಸ್ ನಿಧಾನವಾಗಿ ಬಂತು. ನಿನಗನಿಸುವಂತೆ ಬಹಳ ಹೊತ್ತೇನೂ ಆಗಿಲ್ಲ. ಆನೆಮಹಲಿನಿಂದ ಇಲ್ಲಿಗೆ ಬರಲು ಕನಿಷ್ಠ ಎರಡು ಗಂಟೆ ಬೇಕು. ಅಪ್ಪ ಮತ್ತು ನಾನು ಮಾತಾಡುತ್ತಾ ಬಂದೆವು. ನಮಗೆ ಹೊತ್ತು ಹೋದದ್ದು ತಿಳಿಯಲಿಲ್ಲ. ತಿಳಿದರೂ ಮಾಡುವುದಾದರೂ ಮಾಡುವುದು ಏನು? ಇರುವುದು ಬಸ್ಸಿನೊಳಗಲ್ಲವೆ?' ಎಂದು ನಕ್ಕು,

'ಏನು ಮಾತಾಡಿದೆವು ಅಂತ ನಿಂಗೆ ತಿಳೀಬೇಕೂಂತಿದ್ದರೆ ನಿಧಾನವಾಗಿ ವಿವರವಾಗಿ ಆ ಮೇಲೆ ಹೇಳ್ತೇನೆ. ಈಗ ಮುಖ್ಯವಾದ ಕೆಲವು ವಿಚಾರಗಳ ಬಗ್ಗೆ ಮಾತಾಡಬೇಕಾಗಿದೆ' ಎಂದ ಅಭಿ.

'ಸರಿ' ಎಂದ ಮುರಾರಿ.

'ನಮಗೆ ಒಂದು ವಿಚಿತ್ರವಾದ ವ್ಯಾಜ್ಯದ ಬಗ್ಗೆ ಸಲಹೆ ಪಡೆಯಲು ಒಬ್ಬ ಲಾಯರ ಜೊತೆ ಮಾತಾಡಬೇಕಾಗಿದೆ. ನೀನು ನಮ್ಮನ್ನು ಒಬ್ಬರು ಒಳ್ಳೆಯ ಲಾಯರ ಬಳಿ ಕರೆದುಕೊಂಡು ಹೋಗಬೇಕು. ಅವರ ಜೊತೆ ಮಾತಾಡಿದ ಮೇಲೆ ಆರಾಮವಾಗಿ ಆ ವ್ಯಾಜ್ಯದ ವಿಚಾರ ನಿನಗೆ ಹೇಳುತ್ತೇನೆ' ಎಂದ ಅಭಿ.

ಮುರಾರಿ ಅವರ ಪರಿಚಯದ ಲಾಯರ್ ಪಶುಪತಿ ಎಂಬವರ ಬಳಿ ನರಹರಿ ಮತ್ತು ಅಭಿಯನ್ನು ಕರೆದುಕೊಂಡು ಹೋದ.

**(ಸಶೇಷ)**